<u>ಸಾಕ್ಷಿಯನ್ನು ದಿಃ05-07-2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಖ್ಯ ವಿಚಾರಣೆ : ಅರ್ಜಿದಾರ ಪರ ಶ್ರೀ ಬಿ ಪಿ ಪಿ  ವಕೀಲರಿಂದ</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಎಲ್ಲ ಸಂಗತಿಗಳು ಸರಿ ಹಾಗೂ ಸತ್ಯವಿರುತ್ತವೆ ಮತ್ತು ನನಗೆ ತಿಳಿದಿರುತ್ತವೆ.

ನನ್ನ  ತಂದೆಯ ಮರಣದ ಅಲಬ್ಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 1 ಎಂದು, ನನ್ನ ಮತ್ತು ಅರ್ಜಿದಾರ ನಂ. 3 ರಿಂದ 5 ರವರ ಆಧಾರ ಕಾರ್ಡಿನ ನೋಟರಿಕೃತ ದೃಡಿಕೃತ ಪ್ರತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಮೂಲ ಪ್ರತಿಯೊಂದಿಗೆ ತುಲನೆ ಮಾಡಿ ನೋಡಿ ಮೂಲ ಪ್ರತಿಯನ್ನು ಸಾಕ್ಷಿಗೆ ಹಿಂತಿರುಗಿಸಲಾಯಿತು. ನೋಟರಿನಿಂದ ದೃಡೀಕೃತ ಆಧಾರ ಕಾರ್ಡ ಪ್ರತಿಗಳನ್ನು ಕ್ರಮವಾಗಿ ನಿಪಿ 2 ರಿಂದ 5 ಎಂದು, ದಿನಾಂಕಃ 28-10-2022 ರ ಪ್ರಜಾವಾಣಿ ದಿನಪತ್ರಿಕೆ ಮತ್ತು ದಿನಾಂಕಃ 24-10-2022 ರ ಉದಯವಾಣಿ ದಿನಪತ್ರಿಕೆಗಳಲ್ಲಿ ತೆಗೆದುಕೊಂಡ ಸಾರ್ವಜನಿಕ ನೋಟಿಸನ್ನು ಹಾಜರುಪಡಿಸಿದ್ದು ಸದರಿ ದಿನಪತ್ರಿಕೆಗಳ ಆಯ್ದ ಭಾಗಗಳನ್ನು ಕ್ರಮವಾಗಿ  ನಿಪಿ 6 ಮತ್ತು 7 ಎಂದು  ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಮುಖ್ಯ ವಿಚಾರಣೆಯಲ್ಲಿ ಕೇಳಿದಂತೆ ಆದೇಶ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ ಎದುರುದಾರ ಏಕತರ್ಪಿಯಾಗಿ ಉಳಿದಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ .